# ಸಪ್ತಸ್ವರಗಳನ್ನು ಧ್ಯಾನಿಸುವ 'ಸಪ್ತಕ'

**ಕಳೆದ ಹದಿನಾರು ವರ್ಷಗಳಿಂದ ಸಂಗೀತ ಸಂಘಟನೆಯಲ್ಲಿ ತೊಡಗಿರುವ ಬೆಂಗಳೂರಿನ 'ಸಪ್ತಕ' ಇದೀಗ ಐನೂರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಪೂರೈಸಿದ ಸಂಭ್ರಮದಲ್ಲಿದೆ.**

■ **ಉಮಾ ವೇಣೂರು**




ಸಪ್ತಕದ ವತಿಯಿಂದ ಸಂಗೀತ ಕಛೇರಿ ನೀಡುತ್ತಿರುವ ವಿದುಷಿ ಶುಭಾ ಮುದ್ಗಲ್

ಸಂಗೀತ ಸಂಘಟನೆಯಲ್ಲಿ ತೊಡಗಿ ದೇಶದಾದ್ಯಂತ ಹಲವಾರು ಹಿರಿಯ ಕಿರಿಯ ಕಲಾವಿದರಿಗೆ ವೇದಿಕೆ ಒದಗಿಸಿಕೊಟ್ಟ ಬೆಂಗಳೂರಿನ 'ಸಪ್ತಕ' ಸಂಸ್ಥೆ ಇದೀಗ 500 ಕಾರ್ಯಕ್ರಮ ಸಂಘಟಿಸಿದ ಸಂಭ್ರಮದಲ್ಲಿದೆ. ಯಕ್ಷಗಾನ, ಸಂಗೀತ ಎರಡೂ ಕಲಾ ಪ್ರಕಾರಗಳಲ್ಲಿ ಅತೀವ ಆಸಕ್ತರಾಗಿದ್ದ ಜಿ.ಎಸ್. ಹೆಗಡೆ ಅವರ ಕಲ್ಪನೆಯಲ್ಲಿ ಅರಳಿದ ಈ ಸಂಸ್ಥೆ, ಸಂಗೀತ ಕಛೇರಿ, ಯಕ್ಷಗಾನ ಆಯೋಜನೆಗಳಲ್ಲದೆ ಬಡ ಸಂಗೀತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಸಂಗೀತ ಪರಿಕರಗಳನ್ನು ನೀಡಿ ಸಮಾಜಮುಖಿ ಸೇವೆಯತ್ತ ತೊಡಗಿಸಿಕೊಂಡಿದೆ.

ಸಂಗೀತ ಆಯೋಜನೆಯಲ್ಲೇ ಧನ್ಯತೆ ಹಾಗೂ ಆತ್ಮತೃಪ್ತಿ ಕಾಣುವ ಸಪ್ತಕದ ರೂವಾರಿಗಳಾದ ಜಿ.ಎಸ್. ಹೆಗಡೆ ಹಾಗೂ ಗೀತಾ ಹೆಗಡೆ ದಂಪತಿ ಕಳೆದ ಹದಿನಾರು ವರ್ಷಗಳಿಂದ ನಾಡಿನಾದ್ಯಂತ ಹಲವಾರು ಸಂಗೀತ ಕಛೇರಿಗಳನ್ನು ಆಯೋಜಿಸಿ ಸಂಗೀತದ ಘಮಲನ್ನು ಹರಡುವ ಕಾರ್ಯ ಮಾಡುತ್ತಿರುವುದು ಸ್ತುತ್ಯರ್ಹ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಕೆಳಗಿನೂರು ಗ್ರಾಮದ ಅಣ್ಣುಹಿತ್ತಲದವರಾದ ಜಿ.ಎಸ್. ಹೆಗಡೆ ಮೂಲತಃ ತಬಲಾ ವಾದಕರು. ಪತ್ನಿ ಗೀತಾ ಹಿಂದೂಸ್ತಾನಿ ಗಾಯಕಿ ಹಾಗೂ ಬೋಧಕಿ. ಮಗ ಧನಂಜಯ ಹೆಗಡೆ ಪ್ರತಿಭಾನ್ವಿತ ಗಾಯಕ. ಹೀಗೆ ಇಡೀ ಕುಟುಂಬವೇ ಸಂಗೀತದಲ್ಲಿ ಆಸಕ್ತಿ ತಳೆದಿರುವ ಕಾರಣ, ಸಂಗೀತ ಸೇವೆ ಇವರ ಉಸಿರಲ್ಲೇ ಹಾಸುಹೊಕ್ಕಾಗಿದೆ. ಕಾಲೇಜು ಓದು ಮುಗಿದ ಬಳಿಕ ಕರ್ನಾಟಕ ಬ್ಯಾಂಕ್ ಉದ್ಯೋಗಿಯಾಗಿದ್ದ ಜಿ.ಎಸ್. ಹೆಗಡೆ, 2006ರ ಮೇ ತಿಂಗಳಲ್ಲಿ ಬೆಂಗಳೂರಿನಲ್ಲಿ 'ಸಪ್ತಕ' ಸಂಗೀತ ಸಂಸ್ಥೆ ಕಟ್ಟಿದರು.

ಸಂಗೀತ, ಯಕ್ಷಗಾನ, ತಾಳಮದ್ದಲೆ ಸೇರಿ ಇದುವರೆಗೆ 500 ಕಾರ್ಯಕ್ರಮಗಳನ್ನು ಆಯೋಜಿಸಿದ ಅಗ್ಗಳಿಕೆ 'ಸಪ್ತಕ'ದ್ದು. ಮೊನ್ನೆ ಮೊನ್ನೆ ತಾನೇ (ಏಪ್ರಿಲ್ 15) ದೆಹಲಿಯಲ್ಲಿ ಪಂ. ಜಯತೀರ್ಥ ಮೇವುಂಡಿ ಅವರ ಸಂಗೀತ ಕಛೇರಿ ಆಯೋಜಿಸುವ ಮೂಲಕ ಯಶಸ್ವಿಯಾಗಿ 500ನೇ ಕಾರ್ಯಕ್ರಮ ಸಂಪನ್ನಗೊಳಿಸಿದ ಕೀರ್ತಿಗೆ ಸಪ್ತಕ ಪಾತ್ರವಾಗಿದೆ. ಬೆಂಗಳೂರಲ್ಲದೆ ದೂರದ ದೆಹಲಿ, ಮುಂಬಯಿ, ನಾಸಿಕ್, ಹೈದರಾಬಾದ್, ನಾಂದೇಡ್, ಕೊಲ್ಹಾಪುರ ಮುಂತಾದ ಕಡೆಗಳಲ್ಲೂ ಸಂಗೀತ ಕಛೇರಿ ಆಯೋಜಿಸಿದ್ದು ಸಪ್ತಕದ ಹೆಗ್ಗಳಿಕೆ.



'ಸಪ್ತಕ'ದ ರೂವಾರಿ ಜಿ.ಎಸ್. ಹೆಗಡೆ

'ಹಿರಿಯ ಕಲಾವಿದರ ಜೊತೆಗೆ ಉದಯೋನ್ಮುಖ ಪ್ರತಿಭೆಗಳಿಗೂ ಅವಕಾಶ ನೀಡುತ್ತೇವೆ' ಎನ್ನುವ ಜಿ.ಎಸ್. ಹೆಗಡೆ ಅವರು, ಮಾಗಿದ ಕಲಾವಿದರ ಸಂಗಡ ಅರಳುವ ಪ್ರತಿಭೆಗಳನ್ನೂ ಪೋಷಿಸಿದರೆ ಮುಂದಿನ ಪೀಳಿಗೆಯ ಸಂಗೀತಗಾರರೂ 'ಗಟ್ಟಿಕಾಳು'ಗಳಾಗಿ ಹೊರಹೊಮ್ಮಲು ಸಾಧ್ಯ ಎಂಬ ವಿಶ್ವಾಸ ನನ್ನದು' ಎನ್ನುತ್ತಾರೆ.

ಸಂಗೀತ ಕಛೇರಿಗಳ ಜೊತೆಗೇ ಯಕ್ಷಗಾನ, ತಾಳಮದ್ದಲೆಗಳನ್ನೂ ಆಯೋಜಿಸುವ ಸಪ್ತಕ, ಜಾನಪದ ಕಲೆಯನ್ನು ಪೋಷಿಸುವ ನಿಟ್ಟಿನಲ್ಲಿ ನಮ್ಮ ಜವಾಬ್ದಾರಿಯನ್ನು ಮರೆಯಬಾರದು ಎಂಬ ಮಹತ್ತರ ಆಶಾಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಪ್ರತಿ ವರ್ಷ 20 ಸಂಗೀತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುತ್ತಿದ್ದು, ಇದುವರೆಗೆ 2000ಕ್ಕೂ ಹೆಚ್ಚು ಮಕ್ಕಳಿಗೆ ಧನಸಹಾಯ ನೀಡಲಾಗಿದೆ. ಇದರಲ್ಲೂ ಹೆಚ್ಚಿನ ಧನಸಹಾಯ ಸಲ್ಲುವುದು ಗ್ರಾಮೀಣ ಭಾಗದ ಮಕ್ಕಳಿಗೇ ಎನ್ನುವುದು ಗಮನಾರ್ಹ.

## ಆತ್ಮತೃಪ್ತಿಗಾಗಿ ಕೆಲಸ

'ಸಂಗೀತ ಸೇವೆ ಮಾಡುವುದು ಆತ್ಮತೃಪ್ತಿಗಾಗಿ, ನನ್ನದೇ ಚಿಂತನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ' ಎನ್ನುವ ಅವರು, ಹಿರಿ ಕಿರಿಯ ಕಲಾವಿದರ ಕಲಾಪ್ರದರ್ಶನ ಏರ್ಪಡಿಸಿ ಶ್ರೋತೃಗಳ ಹಾಗೂ ಕಲಾವಿದರ ನಡುವೆ ಸೇತುಬಂಧವಾದಾಗ ಸಿಗುವ ಆತ್ಮ ಸಂತೋಷ ಇನ್ನಾವ ಕೆಲಸದಲ್ಲೂ ಸಿಗಲ್ಲ' ಎಂದು ಹೇಳುತ್ತಾರೆ.

'ಸಪ್ತಕ'ಕ್ಕೆ ಮುಂದಿನ ಹೊಸ ಯೋಜನೆಗಳನ್ನೇನನ್ನೂ ರೂಪಿಸಿಲ್ಲ. ಪ್ರಸ್ತುತ ಇರುವ ಸದುದ್ದೇಶಗಳನ್ನೇ ಕಾರ್ಯಗತಗೊಳಿಸಲು ಅವಿರತವಾಗಿ ಶ್ರಮಿಸುತ್ತೇವೆ, ಈಗ ಮೂರು ವರ್ಷದ ಹಿಂದೆ ಮಗ ಧನಂಜಯ ಹೆಗಡೆ ಬ್ಯಾಂಕ್ ಮ್ಯಾನೇಜರ್ ಹುದ್ದೆ ತೊರೆದು, ಮುಂಬಯಿ ವಾಸಿಯದರೂ 'ಸಪ್ತಕ'ಕ್ಕೆ ನಿರಂತರ ಪ್ರೋತ್ಸಾಹ ನೀಡುತ್ತಿರುವುದು ನಮಗೆ ಆನೆಬಲ ಬಂದಂತಾಗಿದೆ' ಎನ್ನುತ್ತಾರೆ ಸಪ್ತಕದ ಮತ್ತೊಬ್ಬ ರೂವಾರಿ ವಿದುಷಿ ಗೀತಾ ಹೆಗಡೆ. ■